**◆ ಪಂದನಲ್ಲೂರು ಶೈಲಿಯಲ್ಲಿ ಭರತನಾಟ್ಯ ಶಿಕ್ಷಣವನ್ನು ಪಡೆದ ನಂತರ 'ವಸುಂಧರಾ ಬಾಣಿ' ಎನ್ನುವ ಹೊಸ ಶೈಲಿಯ ಪ್ರವರ್ತಕರಾಗಿ ನೀವು ಗುರುತಿಸಿಕೊಂಡಿದ್ದೀರಿ. ಈ ಹೊಸ ಶೈಲಿಯು ರೂಪುಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ನೀವು ಮಾಡಿಕೊಂಡ ತಯಾರಿಗಳೇನು?**

ನಾನು ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ಗುರುಗಳಾದ ರಾಜನ್ ಪಿಳ್ಳೈ ಅವರಿಂದ ಕಲಿತಿದ್ದೇನೆ. ಪ್ರಸ್ತುತ ಪಂದನಲ್ಲೂರು ಶೈಲಿಯು ಬಹಳಷ್ಟು ವ್ಯಾಪಕವಾಗಿ ಚಾಲ್ತಿಯಲ್ಲಿದೆ. ನನಗೆ 'ವಸುಂಧರಾ ಬಾಣಿ' ಎಂಬ ಹೊಸ ಶೈಲಿಯನ್ನು ರೂಪಿಸಬೇಕು ಎನ್ನುವ ಪ್ರಜ್ಞಾಪೂರ್ವಕ ಉದ್ದೇಶವೇನೂ ಇರಲಿಲ್ಲ. ಒಮ್ಮೆ ನಾನು ಮತ್ತು ಮಗ ಶ್ರುತಿ ಸಾಗರ್, ಸೊಸೆ ಮೇಘಲಾ, ನನ್ನ ಶಿಷ್ಯ ಸಂದೇಶ್ ಭಾರ್ಗವ್ ಆಸ್ಟ್ರೇಲಿಯಾದಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಮರಳುತ್ತಿರುವಾಗ ಹೀಗೇ ಹಾರ್ದಿಕವಾಗಿ ಮಾತನಾಡುತ್ತ, 'ಅಮ್ಮ ಪ್ರಸ್ತುತಪಡಿಸುವ ನೃತ್ಯ ಪ್ರಕಾರ ಪಂದನಲ್ಲೂರು ಶೈಲಿಗಿಂತ ತುಂಬ ವಿಭಿನ್ನವಾಗಿದೆ' ಎಂದು ಮಗ ಹೇಳಿದ. ಶಿಷ್ಯವರ್ಗದವರೆಲ್ಲ ನನ್ನನ್ನು ಅಮ್ಮನೆಂದೇ ಕರೆಯುವುದು ವಾಡಿಕೆ. ಆಗ ನನ್ನ ಸೊಸೆ ಮೇಘಲಾ ಕೂಡ ಹೌದೆಂದು, ನನ್ನ ನೃತ್ಯದಲ್ಲಿ ಗೋಚರಿಸುವ ಕೆಲವು ವ್ಯತ್ಯಾಸಗಳೇನು ಎಂದು ಹೇಳುತ್ತ ದನಿಗೂಡಿಸಿದಳು. ಹಾಗಿದ್ದರೆ ಇದನ್ನು 'ವಸುಂಧರಾ ನೃತ್ಯ ಶೈಲಿ' ಎಂದು ಯಾಕೆ ಕರೆಯಬಾರದು ಎಂಬ ಪ್ರಶ್ನೆ ಆ ಸಂಭಾಷಣೆಯಲ್ಲಿಯೇ ಹುಟ್ಟಿಕೊಂಡಿತು. ಅಲ್ಲಿಂದ ಮರಳಿದ ಬಳಿಕ ಶಿಷ್ಯವರ್ಗದವರೆಲ್ಲ ಸೇರಿ, ಈ 'ವಸುಂಧರಾ ಬಾಣಿ'ಯ ಸ್ವರೂಪಗಳನ್ನು ಚರ್ಚಿಸಿದರು. ಲಯಸಿದ್ಧಿಗಾಗಿ ಅಡವುಗಳನ್ನು ತ್ರಿಕಾಲಗಳಲ್ಲಿ ಆರೋಹಣ ಅವರೋಹಣಕ್ರಮದಲ್ಲಿ ಅಭ್ಯಾಸ ಮಾಡಿಸುವುದು ನನ್ನ ಕ್ರಮ. ಇಲ್ಲಿ, ನಾಟ್ಯಕಾರ್ಯಕ್ರಮ ಪ್ರಸ್ತುತಿಯೂ ಮೇಳಪ್ರಾಪ್ತಿಯಿಂದ ಆರಂಭವಾಗುತ್ತದೆ. ವರ್ಣವನ್ನು ಚರಣದಿಂದ ಎತ್ತಿಕೊಳ್ಳುತ್ತೇನೆ. ಇಂತಹ ಮಾರ್ಪಾಟುಗಳನ್ನು ನಾನು ಭಾವಿಸಿಕೊಂಡು, ಅಳವಡಿಸಿಕೊಂಡಿದ್ದರೂ ಅದಕ್ಕೆ ವಿದ್ವಾಂಸರ ಅಂಗೀಕಾರವಿಲ್ಲದೇ, 'ವಸುಂಧರಾ ಬಾಣಿ' ಎಂದು ಘೋಷಿಸಿ ಮುಂದುವರೆದಿಲ್ಲ. ಉದಾಹರಣೆಗೆ, ಮೇಳಪ್ರಾಪ್ತಿಗೆ ಸಂಬಂಧಿಸಿದಂತೆ ನಾನು ರೂಪಿಸಿಕೊಂಡ ಶೈಲಿಗೆ ಮಾರ್ಗದರ್ಶನ ಮಾಡಿದವರು ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ ಅವರು. ಅಲ್ಲದೆ ನೃತ್ಯದ ಶೈಲಿಯಲ್ಲಿ ನಾನು ಮಾಡಿಕೊಂಡ ಸಣ್ಣ ಪುಟ್ಟ ಮಾರ್ಪಾಟುಗಳನ್ನು ಗುರುಗಳೇ ಗಮನಿಸಿ, ಒಪ್ಪಿಗೆ ನೀಡಿದ್ದರಿಂದ ನಾನು ಅಂತಹ ಔಚಿತ್ಯಪೂರ್ಣ ಬದಲಾವಣೆಗಳನ್ನು ಮಾಡುತ್ತಾ ಬಂದಿದ್ದೆ. ಪ್ರತಿಯೊಂದು ಹೆಜ್ಜೆಗಾರಿಕೆಯನ್ನು ಗಮನಿಸಿದ ಗುರುಗಳು, ನಾನು ಮಾಡಿಕೊಂಡ ಬದಲಾವಣೆಗಳನ್ನು ಒಪ್ಪಿದ್ದರು. ಹಾಗೆ ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅಂದರೆ ಆ ಕಾಲಕ್ಕೆ, ನನಗೆ ವಸುಂಧರಾ ಬಾಣಿ ಎಂಬ ಹೊಸ ಶೈಲಿಯನ್ನು ಹುಟ್ಟುಹಾಕಬೇಕೆಂಬ ಇರಾದೆಯೇನೂ ಇರಲಿಲ್ಲ. ಆದರೆ 2014ರಲ್ಲಿ ಮೈಸೂರಿನ ಜಗನ್ಮೋಹನ ಪ್ಯಾಲೇಸ್‌ನಲ್ಲಿ ಒಂದು ಬೃಹತ್ ನೃತ್ಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಅದರಲ್ಲಿ ನವದೆಹಲಿಯ ನೃತ್ಯಗುರು ವಿ. ಸರೋಜಾ ವೈದ್ಯನಾಥನ್, ಇತಿಹಾಸ ತಜ್ಞ ಆಶಿಶ್ ಮೋಹನ್ ಖೋಕರ್, ಕಲಾವಿಮರ್ಶಕ ಸುನೀಲ್ ಕೊಠಾರಿ ಸೇರಿದಂತೆ ಅನೇಕಮಂದಿ ಕಲಾ ದಿಗ್ಗಜರು ಉಪಸ್ಥಿತರಿದ್ದರು. ದೇಶದ ವಿವಿಧೆಡೆಯ ನೃತ್ಯ ವಿದ್ವಾಂಸರು ನನ್ನ ನೃತ್ಯವನ್ನು ನೋಡಿ ಹೇಳಿದ ಅನಿಸಿಕೆಗಳ ವಿಡಿಯೊಗಳನ್ನು ಅಲ್ಲಿ ಪ್ರದರ್ಶಿಸಲಾಯಿತು. ಹೀಗೆ ಬೃಹತ್ ಕಲಾ ಸಂದೋಹವು ಅಂಗೀಕರಿಸಿದ ಬಳಿಕ ಗುರು ಸರೋಜಾ ವೈದ್ಯನಾಥನ್ ವಸುಂಧರಾ ಬಾಣಿಯನ್ನು ಘೋಷಿಸಿ ಉದ್ಘಾಟಿಸಿದರು. ಈಗ ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಅಮೆರಿಕ, ಆಸ್ಟ್ರೇಲಿಯ ಮುಂತಾದೆಡೆಗಳಲ್ಲಿ ವಸುಂಧರಾ ಬಾಣಿ ಕಲಿಸುತ್ತಿರುವ ಶಿಷ್ಯಂದಿರು ಇದ್ದಾರೆ.

**◆ ಶಿಷ್ಯವರ್ಗದ ವಿಚಾರದಲ್ಲಿ ನೀವು ಬಹಳ ಅದೃಷ್ಟವಂತೆ ಎನಿಸುತ್ತದೆ.**

ನೂರಕ್ಕೆ ನೂರು ನಿಜ. ನನ್ನಿಂದ ನೃತ್ಯ ಪಾಠ ಹೇಳಿಸಿಕೊಂಡ ಶಿಷ್ಯಂದಿರು ನಂತರ ಕಲಿತ ಶಾಲೆಯನ್ನಾಗಲೀ, ಕಲಿಸಿದ ಗುರುವನ್ನಾಗಲೀ ಮರೆತಿಲ್ಲ. ಮೈಸೂರಿನಲ್ಲಿರುವ 'ವಸುಂಧರಾ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್' ಶಿಷ್ಯವರ್ಗದವರಿಗೆ ಆಪ್ತ ಮನೆಯಿದ್ದಂತೆ. ಎಲ್ಲರೂ ಗುರುಗಳನ್ನು ಗೌರವಿಸುತ್ತ ತಾವೂ ಬೆಳೆಯುತ್ತಿದ್ದಾರೆ. ಮೈಸೂರಿನ ಸರಸ್ವತೀಪುರಂನಲ್ಲಿ ಶಿಷ್ಯೆ ಪ್ರಮಿತಾ ಗೋವಿಂದನ್